# ಕರ್ನಾಟಕ ವಿಧಾನ ಪರಿಷತ್ತು

| | | | |
|---|---|---|---|
| 1 | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1482 |
| 2 | ಸದಸ್ಯರ ಹೆಸರು | : | ಶ್ರೀ ಎಸ್.ವೀಣಾ ಅಚ್ಚಯ್ಯ (ವಿಧಾನ ಸಭೆಯಿಂದ ಚುನಾಯಿತರಾದವರು) |
| 3 | ಉತ್ತರಿಸುವ ದಿನಾಂಕ | : | 24.09.2021. |
| 4 | ಉತ್ತರಿಸುವ ಸಚಿವರು | : | ಮಾನ್ಯ ಯೋಜನಾ ಸಚಿವರು,<br>ಯೋಜನೆ, ಕಾರ್ಯಕ್ರಮ ಸಂಯೋಜನೆ<br>ಮತ್ತು ಸಾಂಖ್ಯಿಕ ಇಲಾಖೆ. |

******

| | ಪ್ರಶ್ನೆ | ಉತ್ತರ |
|---|---|---|
| (ಅ) | ರಾಜ್ಯದಲ್ಲಿ 2016-17 ರಿಂದ 2020-2021ರವರೆಗೆ ಪ್ರತಿಯೊಬ್ಬ ಮಾನ್ಯ ಶಾಸಕರು ಸೂಚಿಸಿದ ಕಾಮಗಾರಿಗಳಿಗೆ, ಸರ್ಕಾರದಿಂದ ಪ್ರತಿ ವರ್ಷ ಬಿಡುಗಡೆಯಾದ ಕಂತು ಮತ್ತು ಅನುದಾನ ವೆಷ್ಟು; ಹಾಗೂ ಪ್ರತಿಯೊಬ್ಬ ಮಾನ್ಯ ಶಾಸಕರು ಸೂಚಿಸಿದ ಕಾಮಗಾರಿಗಳಿಗೆ ಯಾವ ವರ್ಷದಲ್ಲಿ ಎಷ್ಟು ಮೊತ್ತದ ಅನುದಾನವನ್ನು ಜಿಲ್ಲಾಧಿಕಾರಿಗಳ ಪಿ.ಡಿ. ಖಾತೆಯಲ್ಲಿ ಬಾಕಿ ಇದ್ದ ಅನುದಾನದಿಂದ ಬಳಸಿಕೊಳ್ಳಲು ಸೂಚಿಸಲಾಗಿತ್ತು. | ರಾಜ್ಯದಲ್ಲಿ, ಕರ್ನಾಟಕ ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆಯಡಿ 2016-17 ರಿಂದ 2020-2021ರವರೆಗೆ ಪ್ರತಿಯೊಬ್ಬ ಮಾನ್ಯ ಶಾಸಕರು ಪ್ರಸ್ತಾಪಿಸುವ ಕಾಮಗಾರಿ/ಕ್ರಿಯಾ ಯೋಜನೆಗೆ ಜಿಲ್ಲಾಧಿಕಾರಿ ಮತ್ತು ಉಪವಿಭಾಗಾಧಿಕಾರಿಗಳ ಹಂತದಲ್ಲಿ ಅನುಮೋದನೆ ನೀಡಲಾಗುತ್ತಿದೆ.<br><br>2016-17ನೇ ಸಾಲಿನಿಂದ 2020-2021ನೇ ಸಾಲಿನವರೆಗೆ ಬಿಡುಗಡೆಯಾದ ಕಂತು ಮತ್ತು ಅನುದಾನ ವಿವರಗಳು ಕೆಳಕಂಡಂತಿದೆ:- |

| ಕ್ರ ಸಂ | ವರ್ಷ | ಬಿಡುಗಡೆಯಾದ ಕಂತುಗಳು (ತಲಾ ರೂ.50.00 ಲಕ್ಷಗಳು) | ಬಿಡುಗಡೆಯಾದ ಅನುದಾನ (ರೂ.ಕೋಟಿಗಳಲ್ಲಿ) |
|---|---|---|---|
| 1 | 2016-17 | 4 | 590.00 |
| 2 | 2017-18 | 4 | 623.00 |
| 3 | 2018-19 | 2 | 466.998 |
| 4 | 2019-20* | 4 | 296.06 |
| 5 | 2020-21 | 4 | 598.86 |

2018-19ನೇ ಸಾಲಿನಲ್ಲಿ ನಾಲ್ಕನೇ ಕಂತಿನ ಅನುದಾನದಲ್ಲಿ ವಿಶೇಷ ಘಟಕ ಯೋಜನೆ ಮತ್ತು ಗಿರಿಜನ ಉಪಯೋಜನೆಯಡಿ ಅನುದಾನವನ್ನು ಬಿಡುಗಡೆಗೊಳಿಸಲಾಗಿರುತ್ತದೆ. ಈ ಸಾಲಿನಲ್ಲಿ ಬಂಡವಾಳ ವೆಚ್ಚದಡಿ ರೂ.127.69 ಕೋಟಿಗಳು ಬಿಡುಗಡೆಗೆ ಬಾಕಿಯಿದ್ದು, ಸದರಿ ಅನುದಾನವನ್ನು ಬಿಡುಗಡೆ ಮಾಡುವ ಸಂಬಂಧ ಆರ್ಥಿಕ ಇಲಾಖೆಯನ್ನು ಕೋರಲಾಗಿದ್ದು, ಆರ್ಥಿಕ ಇಲಾಖೆಯು ದಿನಾಂಕ:09.08.2021ರಲ್ಲಿ ಪ್ರಸಕ್ತ ಸಾಲಿನಲ್ಲಿ ಲಭ್ಯವಿರುವ ಅನುದಾನ ಪೂರ್ಣವಾಗಿ ವೆಚ್ಚವಾದ ನಂತರ ಬಿಡುಗಡೆಗೊಳಿಸಲಾಗುವುದೆಂದು ಹಿಂಬರಹ ನೀಡಿರುತ್ತದೆ. ಆದ್ದರಿಂದ, ಲಭ್ಯವಿರುವ ಅನುದಾನ ವೆಚ್ಚವಾದ ನಂತರ ಸದರಿ ಅನುದಾನವನ್ನು ಬಿಡುಗಡೆ ಮಾಡಲಾಗುತ್ತದೆ.

2019-20ನೇ ಸಾಲಿನಲ್ಲಿ ಎರಡು ಕಂತುಗಳು ಬಿಡುಗಡೆಯಾಗಿದ್ದು, ಬಾಕಿ ಇದ್ದ ರೂ.300.00 ಕೋಟಿ ಅನುದಾನವನ್ನು, 2020-21ನೇ ಸಾಲಿನಲ್ಲಿ ಎಲ್ಲಾ ಕ್ಷೇತ್ರಗಳಿಗೆ ಬಿಡುಗಡೆ ಮಾಡಲಾಗಿರುವ ಅನುದಾನದಲ್ಲಿ ರೂ.300.00 ಕೋಟಿಗಳನ್ನು 2019-20ನೇ ಸಾಲಿಗೆ ವರ್ಗಾಯಿಸಿಕೊಂಡು ವೆಚ್ಚ ಮಾಡಲು ಆರ್ಥಿಕ ಇಲಾಖೆಯು ಸಹಮತಿ ನೀಡಿದ್ದು, ಈ ಸಂಬಂಧ ದಿನಾಂಕ:13.08.2021 ರಂದು ಸುತ್ತೋಲೆ ಹೊರಡಿಸಿ, ಎಲ್ಲಾ ಜಿಲ್ಲಾಧಿಕಾರಿಗಳಿಗೆ ಸೂಚನೆ ನೀಡಲಾಗಿದೆ.

...2

| ಪ್ರಶ್ನೆ | | ಉತ್ತರ |
|---|---|---|
| (ಆ) | 2016-17 ರಿಂದ 2020-2021ರವರೆಗೆ ಪ್ರತಿಯೊಬ್ಬ ಮಾನ್ಯ ಶಾಸಕರು ಎಷ್ಟು ಮೊತ್ತದ ಕಾಮಗಾರಿಗಳನ್ನು ಸೂಚಿಸಿ, ಅನುದಾನ ಪಡೆಯಲು ಸರ್ಕಾರ ಆದೇಶಿಸಿತ್ತು? (ಪ್ರತಿ ವರ್ಷದ ವಿವರವನ್ನು ಪ್ರತ್ಯೇಕವಾಗಿ ನೀಡುವುದು). | ಕರ್ನಾಟಕ ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆಯ ಮಾರ್ಗಸೂಚಿ ಕಂಡಿಕೆ-1.3ರಲ್ಲಿರುವಂತೆ 2013-14ನೇ ಸಾಲಿನಿಂದ ಮಾನ್ಯ ಶಾಸಕರ ಅನುದಾನವನ್ನು ರೂ.1.00 ಕೋಟಿಗಳಿಂದ ರೂ.2.00 ಕೋಟಿಗಳಿಗೆ ಹೆಚ್ಚಿಸಲಾಗಿರುತ್ತದೆ.<br><br>2016-17ನೇ ಸಾಲಿನಿಂದ 2019-20ನೇ ಸಾಲಿನವರೆಗೆ ತಲಾ ರೂ.2.00 ಕೋಟಿಗಳನ್ನು ಬಿಡುಗಡೆಗೊಳಿಸಲಾಗುರುತ್ತದೆ.<br><br>ದಿನಾಂಕ:29.04.2021ರಲ್ಲಿ ಆರ್ಥಿಕ ಇಲಾಖೆಯು "2020-2021ನೇ ಸಾಲಿನಲ್ಲಿ ಕೋವಿಡ್-19 ಸಾಂಕ್ರಾಮಿಕ ರೋಗದ ಹಿನ್ನೆಲೆಯಲ್ಲಿ ಪ್ರತಿ ಕರ್ನಾಟಕ ಶಾಸಕರ ಪ್ರದೇಶಾಭಿವೃದ್ಧಿ ಯೋಜನೆಯಡಿ ರೂ.1.00 ಕೋಟಿಗಳಿಗೆ ಮಿತಿಗೊಳಿಸಲಾಗಿದೆ. ಉಳಿದ ಸಾಲುಗಳಲ್ಲಿ ಸದರಿ ಆರ್ಥಿಕ ಸಾಲುಗಳಲ್ಲಿ ತಲಾ ರೂ.2.00 ಕೋಟಿಗಳ ಅನುದಾನವನ್ನು ಬಿಡುಗಡೆಗೊಳಿಸಲಾಗಿದೆ. |

ಸಂಖ್ಯೆ: ಪಿಡಿಎಸ್ 94 ಕೆಎಲ್‌ಎಸ್ 2021

(ಮುನಿರತ್ನ)
ಸಚಿವರು
ಯೋಜನೆ,ಕಾರ್ಯಕ್ರಮ ಸಂಯೋಜನೆ
ಮತ್ತು ಸಾಂಖ್ಯಿಕ ಇಲಾಖೆ